**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಇವರ ಗಮನ ಸೆಳೆಯುವ ಸೂಚನೆಗೆ ಸನ್ಮಾನ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

ಪ್ರಶ್ನೆ:

**ರಾಜ್ಯದಲ್ಲಿ ಕಾಳಿ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ರಾಷ್ಟ್ರೀಯ ಅಭಯಾರಣ್ಯ, ಭೀಮಗಡ ಅಭಯಾರಣ್ಯ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಮುಂತಾದ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಜನವಸತಿ ಪ್ರದೇಶಗಳನ್ನು ತೆರವುಗೊಳಿಸಬೇಕಾದರೆ ಕೇವಲ ಧನ ಸಹಾಯದ ಪ್ಯಾಕೇಜ್ ಅಷ್ಟೇ ನೀಡದೆ, ಸದರಿ ಜನಾಂಗಗಳ ಕುಲಕಸುಬು, ಆಚಾರ ವಿಚಾರ, ಸಂಸ್ಕೃತಿ, ಧಾರ್ಮಿಕ ಆಚರಣಾ ಪದ್ಧತಿಗಳ ರಕ್ಷಣೆಗಾಗಿ ಅವರು ಒಂದೇ ಜಾಗದಲ್ಲಿ ಇರುವಂತಾಗಲು ಅವರಿಗಾಗಿ ಒಂದೇ ಕಡೆ ಭೂಮಿಯನ್ನು ನೀಡುವುದರ ಜೊತೆಗೆ ಮೂಲಭೂತ ಸೌಕರ್ಯಗಳನ್ನು ನೀಡಬೇಕೆನ್ನುವ ಸಾರ್ವಜನಿಕ ಮಹತ್ವ ವಿಷಯದ ಕುರಿತು ಸದನದಲ್ಲಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.**

*******

**ಹೇಳಿಕೆ:**

ರಾಜ್ಯದಲ್ಲಿ ಸಂರಕ್ಷಿತ ಪ್ರದೇಶಗಳಿಂದ ಅರಣ್ಯವಾಸಿಗಳ ಸ್ವ-ಇಚ್ಛೆಯ ಮೇರೆಗೆ ಪುನರ್ವಸತಿ ಯೋಜನೆಯು ಚಾಲ್ತಿಯಲ್ಲಿರುತ್ತದೆ. ಸದರಿ ಯೋಜನೆಯನ್ನು ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಪ್ರಸ್ತುತ ಈ ಕೆಳಕಂಡಂತೆ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

I. **ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿಯ ಮಾರ್ಗಸೂಚಿಗಳ ಪ್ರಕಾರ: -**

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿ ರವರು ದಿನಾಂಕ: 15.10.2012 ರಂದು ಹೊರಡಿಸಿರುವ ಕ್ರೂಢೀಕೃತ ಮಾರ್ಗಸೂಚಿಗಳ ಪ್ರಕಾರ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮತ್ತು ಹೊರಬರಲು ಸ್ವ-ಇಚ್ಛೆ ವ್ಯಕ್ತಪಡಿಸುವ ಕುಟುಂಬಗಳಿಗೆ ಪುನರ್ವಸತಿಗಾಗಿ ಎರಡು ಆಯ್ಕೆಗಳನ್ನು ನೀಡಲಾಗಿದೆ.

**(ಎ) ಆಯ್ಕೆ 1:ಸಂಪೂರ್ಣ ಪ್ಯಾಕೇಜ್ ಮೊತ್ತದ ಪಾವತಿ [ಪ್ರತಿ ಕುಟುಂಬಕ್ಕೆ ರೂ. 15 ಲಕ್ಷಗಳು (ಪರಿಷ್ಕೃತ)]:**

ಅರಣ್ಯ ಇಲಾಖೆಯಿಂದ ಯಾವುದೇ ಪುನರ್ವಸತಿ/ಸ್ಥಳಾಂತರ ಪ್ರಕ್ರಿಯೆಯನ್ನು ಒಳಗೊಳ್ಳದ ಆಯ್ಕೆ ಇದಾಗಿರುತ್ತದೆ. ಕುಟುಂಬವು ಇದನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಸಂಪೂರ್ಣ ಪ್ಯಾಕೇಜ್ ಮೊತ್ತವನ್ನು (ಪ್ರತಿ ಕುಟುಂಬಕ್ಕೆ ರೂ. 15 ಲಕ್ಷ) ಪಾವತಿಸುವುದು.

**(ಬಿ) ಆಯ್ಕೆ 2:ಅರಣ್ಯ ಇಲಾಖೆಯಿಂದ ಸಂರಕ್ಷಿತ ಪ್ರದೇಶ ಅಥವಾ ಹುಲಿ ಸಂರಕ್ಷಿತ ಪ್ರದೇಶದಿಂದ ಗ್ರಾಮಸ್ಥರನ್ನು ಸ್ಥಳಾಂತರಿಸುವುದು ಅಥವಾ ಪುನರ್ವಸತಿ ಮಾಡುವುದು (ಪ್ರತಿ ಕುಟುಂಬಕ್ಕೆ ರೂ. 15 ಲಕ್ಷಗಳು).**

ಕುಟುಂಬವು ಈ ಆಯ್ಕೆಯನ್ನು ವ್ಯಕ್ತಪಡಿಸಿದಲ್ಲಿ, ಈ ಕೆಳಕಂಡ ಪ್ಯಾಕೇಜ್‌ರಂತೆ ಕಾರ್ಯಗತಗೊಳಿಸುವುದು.

| | | |
|---|---|---|
| a. | 2 ಹೆಕ್ಟೇರ್ ಕೃಷಿ ಭೂಮಿಯ ಖರೀದಿ ಮತ್ತು ಅಭಿವೃದ್ಧಿ ಕಾರ್ಯಗಳು | ಒಟ್ಟು ಪ್ಯಾಕೇಜಿನ ಶೇ. 35 |
| b. | ಹಕ್ಕುಗಳ ನಿವಾರಣೆ (Settlement of rights) | ಒಟ್ಟು ಪ್ಯಾಕೇಜಿನ ಶೇ. 30 |
| c. | ಮನೆ/ಮನೆ (ಹೋಮ್‌ಸ್ಟೆಡ್) ಭೂಮಿ ಮತ್ತು ಮನೆ ನಿರ್ಮಾಣ | ಒಟ್ಟು ಪ್ಯಾಕೇಜಿನ ಶೇ. 20 |
| d. | ಪ್ರೋತ್ಸಾಹ (Incentive) | ಒಟ್ಟು ಪ್ಯಾಕೇಜಿನ ಶೇ. 5 |
| e. | ಕುಟುಂಬಕ್ಕೆ ಒದಗಿಸಲಾಗುವ ಸಮುದಾಯ ಸೌಲಭ್ಯಗಳು (ಪ್ರವೇಶ ರಸ್ತೆ, ನೀರಾವರಿ, ಕುಡಿಯುವ ನೀರು, ನೈರ್ಮಲ್ಯತೆ, ವಿದ್ಯುತ್ ಸಂಪರ್ಕ, ದೂರಸಂಪರ್ಕ, ಸಮುದಾಯ ಕೇಂದ್ರ, ಧಾರ್ಮಿಕ ಆರಾಧನಾ ಸ್ಥಳಗಳು, ಸಮಾಧಿ ಮತ್ತು ದಹನ ಸ್ಥಳ). | ಒಟ್ಟು ಪ್ಯಾಕೇಜಿನ ಶೇ. 10 |

II. **ಸರ್ಕಾರದ ಆದೇಶ ಸಂಖ್ಯೆ: RD26REH2003, Bangalore dated: 18.04.2005 ರಲ್ಲಿ ಆದೇಶದನ್ವಯ.**

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ರಕ್ಷಿತಾರಣ್ಯದ ಸುತ್ತುಗಟ್ಟಿನಲ್ಲಿ ವಾಸಿಸುತ್ತಿರುವ ಕುಟುಂಬಗಳು ಸಾಕಷ್ಟು ಹಿಡುವಳಿ ಜಮೀನನ್ನು ಹೊಂದಿದ್ದು, ಈ ಜಮೀನುಗಳಲ್ಲಿ ತೋಟ, ಗದ್ದೆ ಇನ್ನಿತರ ಅಭಿವೃದ್ಧಿಗಳನ್ನು ಕೂಡ ಕೈಗೊಂಡಿರುತ್ತಾರೆ. ಸರ್ಕಾರದ ಸದರಿ ಆದೇಶದನ್ವಯ ಭೂ-ಸ್ವಾಧೀನ ಕಾಯ್ದೆಯಲ್ಲಿ ನಿಯಮಿಸಲಾದಂತೆ, ಕುಟುಂಬಗಳು ತಮ್ಮ ಭೂಮಿ, ಕಟ್ಟಡ ಮತ್ತು ತಮ್ಮ ಭೂಮಿಯಲ್ಲಿ ಇರುವ ಮಾಲ್ಕಿಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ಇಂತಹ ಪ್ರಕರಣಗಳಲ್ಲಿ ಪುನರ್ವಸತಿ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ರಚಿಸಲಾಗಿರುತ್ತದೆ. ಅದರನ್ವಯ, ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಸಂಬಂಧಿಸಿದಂತೆ ಕುಟುಂಬಗಳ ಸ್ವ-ಇಚ್ಛೆ ಮೇರೆಗೆ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವನ್ (ಸಂರಕ್ಷಣ್ ಏವಂ ಸಂವರ್ಧನ್) ಅಧಿನಿಯಮ, 1980 ಹಾಗೂ ನಿಯಮಾವಳಿಗಳು, 2023ಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ಸಂಯೋಜಿತ ಮಾರ್ಗಸೂಚಿಗಳು ಮತ್ತು ಸ್ಪಷ್ಟೀಕರಣಗಳ ಪ್ಯಾರಾ 12.8 ರಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು, ಹುಲಿ ಸಂರಕ್ಷಿತ ಪ್ರದೇಶ, ರಾಷ್ಟ್ರೀಯ ಉದ್ಯಾನವನ, ವನ್ಯಜೀವಿಧಾಮಗಳ ಕೋರ್ ಭಾಗದಿಂದ ಮೀಸಲು ಅರಣ್ಯ/ವನ್ಯಜೀವಿಧಾಮ/ರಾಷ್ಟ್ರೀಯ ಉದ್ಯಾನವನಗಳ ಗಡಿ ಪ್ರದೇಶ (periphery) ಗಳಲ್ಲಿ ಕುಟುಂಬಗಳ ಸ್ವ-ಇಚ್ಛೆ ಮೇರೆಗೆ ಪುನರ್ವಸತಿಯನ್ನು ಕಲ್ಪಿಸಬಹುದಾಗಿರುತ್ತದೆ.

**ಇ-ಸಂಖ್ಯೆ: ಅಪಜೀ 341 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು